Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 | Issue - 32 | 2nd February 2025

## Impression on Dist Conferences

## ಕುಟುಂಬ ಸಮ್ಮಿಲನ

ಪ್ರಾಯೋಜಕರು :

ರೊ. ಪಿಡಿಜಿ. ಅಭಿನಂದನ್ ಶೆಟ್ಟಿ

Time : 6.30 p.m.
Venue : Green Woods, Senapura.

**39th year of Service and Fellowship**




ತಾ. 23-01-2025ರಂದು ನಡೆದ ನಮ್ಮ ಸಾಪ್ತಾಹಿಕ ಸಭೆಯು ಕ್ಲಬ್ ಅಸೆಂಬ್ಲಿಯಾಗಿದ್ದು, ಫೆಬ್ರವರಿ 23ರಂದು ನಡೆಯಲಿರುವ World Understanding and Peace Day ಯನ್ನು ನಮ್ಮ ವಲಯ ಮಟ್ಟದಲ್ಲಿ ಆಚರಿಸಲು ಹಾಗೂ ಅದರ ಆತಿಥ್ಯವನ್ನು ನಾವು ವಹಿಸಬೇಕಾದುದರಿಂದ ಇದರ ಬಗ್ಗೆ ಚರ್ಚಿಸಲು ಕರೆಯಲಾಗಿತ್ತು. Zone Lieutenant ರೊ. ಮಹೇಂದ್ರ ಶೆಟ್ಟಿಯವರನ್ನು ವೇದಿಕೆಗೆ ಆಹ್ವಾನಿಸಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಆಗಮಿಸಿದ ಎಲ್ಲರಿಗೂ ಆತ್ಮೀಯವಾಗಿ ಸ್ವಾಗತಿಸಿದರು. ರೊ. ಶ್ರೀನಿವಾಸ್ ಶೇಟ್‌ರವರು ಪ್ರಾರ್ಥನೆಯ ಮೂಲಕ ಸಭೆಗೆ ಚಾಲನೆಯನ್ನು ನೀಡಿದರು. ಕಳೆದ ವಾರದ ವರದಿಯನ್ನು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ ರೊ. ಸತ್ಯನಾರಾಯಣ ಪುರಾಣಿಕ್ ರವರು ಸಭೆಯಲ್ಲಿ ಮಂಡಿಸಿದರು. ವಾರದ ಚಿಂತನೆಯನ್ನು ನೀಡಿದ ರೊ. ವಿವಿಯನ್ ಕ್ರಾಸ್ತಾರವರು "ಪ್ರತಿಯೊಬ್ಬರ ಜೀವನದ ಪಯಣದಲ್ಲಿ ದುಡ್ಡು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಕುಟುಂಬದಲ್ಲಿ ಆರ್ಥಿಕ ಸಮತೋಲನವನ್ನು ಕಾಪಾಡಿಕೊಂಡು ಹೋಗುವುದು ಕುಟುಂಬದ ಯಶಸ್ಸಿನ ಪ್ರಮುಖ ಪಾತ್ರ" ವೆಂದರು. ರೋಟರಿ ಮಾಹಿತಿ ನೀಡಿದ ರೊ. ದೋಮ ಚಂದ್ರಶೇಖರ್‌ರವರು ರೋಟರಿ ಕ್ಲಬ್ಬಿನಲ್ಲಿ "ಸಾರ್ಜೆಂಟ್ ಅಟ್ ಆರ್ಮ್ಸ್" ಎಂಬ ಪದವಿಯ ಜವಾಬ್ದಾರಿಗಳು ಮತ್ತು ಮಹತ್ವಗಳ ಬಗ್ಗೆ ರೋಟರಿ MOPಯಲ್ಲಿ ಉಲ್ಲೇಖಿಸಿದ ಮಾತುಗಳನ್ನು ಸ್ಪಷ್ಟಪಡಿಸಿದರು. ನಂತರ ಮಾತನಾಡಿದ ರೊ. ಮಹೇಂದ್ರ ಶೆಟ್ಟಿಯವರು ನಮಗೆ AG ನೀಡಿದ ಈ ಸಾಲಿನ ವಲಯ ಮಟ್ಟದ ಕಾರ್ಯಾಗಾರವನ್ನು ನಮ್ಮ ಕ್ಲಬ್ಬಿನವರು ನಡೆಸಬೇಕಾದುದರಿಂದ ನಮ್ಮ ಕ್ಲಬ್ಬಿನ ಘನತೆಗೆ ಸರಿಯಾಗಿ ನಡೆಸಬೇಕಾದ ಅನಿವಾರ್ಯತೆ ನಮಗಿದೆ. ಎಲ್ಲಾ ಕ್ಲಬ್‌ಗಳು ಕೂಡ ನಮ್ಮನ್ನು ಗಮನಿಸುವಾಗ ನಾವು ಆದಷ್ಟು ಚೆನ್ನಾಗಿ ಮಾಡಬೇಕಾಗಿರುವುದರಿಂದ ಒಂದು ಸ್ಮರಣೀಯ ಕಾರ್ಯಕ್ರಮವಾಗಿ ರೂಪಿಸಲು ಯೋಜನೆಗಳನ್ನು ಹಾಕಿದ್ದೇವೆ. ಕಾರ್ಯಕ್ರಮವನ್ನು ಉದ್ಘಾಟಿಸಲು ಕರ್ನಾಟಕ ಸರಕಾರದ ವಿಧಾನಸಭೆಯ ಸ್ಪೀಕರ್ ಆಗಿರುವ ಮಾನ್ಯ ಯು. ಟಿ. ಖಾದರ್‌ರವರು ಹಾಗೂ ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರಾದ ಶ್ರೀ ಜಯಪ್ರಕಾಶ್ ಹೆಗ್ಡೆಯವರು ಬರಲು ಒಪ್ಪಿರುತ್ತಾರೆ. ಸಮಾಜ ಸೇವೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮ ಸೇವೆಗೈದ ಸುಮಾರು 10 ಸಾಧಕರನ್ನು ಗುರುತಿಸಿ ಸನ್ಮಾನಿಸಲು ತೀರ್ಮಾನಿಸಿದ್ದೇವೆ. ಇಡೀ ಕಾರ್ಯಕ್ರಮವನ್ನು RJ ಸೌಜನ್ಯ ಶೆಟ್ಟಿಯವರು ನಿರೂಪಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಈ ಕಾರ್ಯಕ್ರಮವನ್ನು ಯುವ ಮೆರಿಡಿಯನ್‌ರವರು ರಿಯಾಯಿತಿ ದರದಲ್ಲಿ ನಡೆಸಿಕೊಡಲು ಒಪ್ಪಿರುವುದರಿಂದ ಒಳ್ಳೆಯ ವಾತಾವರಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಎಲ್ಲಾ ಸದಸ್ಯರು ಈ ಕಾರ್ಯಕ್ರಮಕ್ಕೆ ಒಂದು ಡ್ರೆಸ್‌ಕೋಡಿನಲ್ಲಿ ಬಂದರೆ ಕಾರ್ಯಕ್ರಮದ ಶೋಭೆ ಹೆಚ್ಚಲಿದೆ. ಕಾರ್ಯಕ್ರಮದ ಖರ್ಚಿಗೆ ಎಲ್ಲಾ ಸದಸ್ಯರು ತಲಾ ರೂ. 2,000/- ದ ದೇಣಿಗೆಯನ್ನು ನೀಡಿದಲ್ಲಿ ಸಮಾರಂಭವನ್ನು ಯಶಸ್ವಿಯಾಗಿ ನಡೆಸಲು ಸಾಧ್ಯ ಎನ್ನುವ ಮಾಹಿತಿಯನ್ನು ನೀಡಿದರು. ನಂತರ ಮಾತನಾಡಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ರೊ. ಮಹೇಂದ್ರ ಶೆಟ್ಟಿಯವರು ಯಾವುದೇ ಕಾರ್ಯಕ್ರಮವನ್ನು ಮಾಡಿದರೆ ತುಂಬಾ ಅಚ್ಚುಕಟ್ಟಾಗಿ ವಿಜೃಂಭಣೆಯಿಂದ ಹೊಣೆಭರಿತರಾಗಿ ಕಾರ್ಯವನ್ನು ಮಾಡುವುದರಿಂದ ಎಲ್ಲರೂ ಅವರಿಗೆ ಉತ್ತಮ ಸಹಕಾರವನ್ನು ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಸಹಕರಿಸಬೇಕೆಂದು ಕೇಳಿದರು.

ತಾ. 02, ಆದಿತ್ಯವಾರದ ಬೆಳಿಗ್ಗೆ ನಮ್ಮ ಕ್ಲಬ್ಬಿನ ವತಿಯಿಂದ ತಾಲೂಕು ಮಟ್ಟದ "ಕೃಷಿ ವಿಚಾರ ಸಂಕಿರಣ"ವನ್ನು ನಡೆಸಲು ಉದ್ದೇಶಿಸಲಾಗಿದೆ. ಇದರಲ್ಲಿ ಅರಣ್ಯ ಕೃಷಿ, ಅಣಬೆ ಕೃಷಿ ಹಾಗೂ ತಾರಸಿ ಕೃಷಿ ಎನ್ನುವ ಮೂರು ಪ್ರಮುಖ ವಿಚಾರಗಳಲ್ಲಿ ಕಾರ್ಯಾಗಾರವನ್ನು ನಡೆಸಲಿದ್ದೇವೆ. Dist Projectಗಳಲ್ಲಿ ಒಂದಾದ ಈ ಕಾರ್ಯಕ್ರಮವು ಕುಂದಾಪುರದ ಕಲಾ ಮಂದಿರದಲ್ಲಿ ಬೆಳಿಗ್ಗೆ 9.30ಕ್ಕೆ ಪ್ರಾರಂಭಿಸಿ, ಮಧ್ಯಾಹ್ನ 1.00 ಗಂಟೆಗೆ ಮುಗಿಯಲಿದೆ. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರ ಮುಂದಾಳತ್ವದಲ್ಲಿ ಈ ಕಾರ್ಯಕ್ರಮವು ನಡೆಯಲಿರುವುದರಿಂದ ಖ್ಯಾತ ಕೃಷಿಕರು ಉದ್ಘಾಟಕರಾಗಿ ಹಾಗೂ ಉತ್ತಮ ಸಂಪನ್ಮೂಲ ವ್ಯಕ್ತಿಗಳು ಇದರಲ್ಲಿ ಭಾಗಿಯಾಗುವುದರಿಂದ ಎಲ್ಲರೂ ಈ ಜ್ಞಾನವನ್ನು ಬಳಸಿದಲ್ಲಿ ಹಾಗೂ ಉಪಯೋಗಿಸಿದಲ್ಲಿ ಆರ್ಥಿಕ ಪ್ರಯೋಜನವನ್ನು ನಿರಂತರವಾಗಿ ಪಡೆಯಬಹುದು ಎಂದರು.

2026-27ನೇ ಸಾಲಿಗೆ ನಮ್ಮ ಕ್ಲಬ್ಬಿನ ನಾಯಕತ್ವವನ್ನು ವಹಿಸಲು ನಮ್ಮ ಹಿರಿಯ ಸದಸ್ಯರಾದ ರೊ. ಡಾ. ಆದರ್ಶ್ ಹೆಬ್ಬಾರ್‌ರವರು ಒಪ್ಪಿಗೆಯನ್ನು ನೀಡಿದುದನ್ನು ಅಧ್ಯಕ್ಷರು ಸಭೆಯಲ್ಲಿ ಅಧಿಕೃತವಾಗಿ ಪ್ರಕಟಿಸಿ ತುಂಬು ಹೃದಯದ ಅಭಿನಂದನೆಗಳನ್ನು ಸದಸ್ಯರ ಪರವಾಗಿ ನೀಡಿದರು. ಎರಡನೆಯದಾಗಿ 2027-28ನೇ ಸಾಲಿಗೆ ಅಧ್ಯಕ್ಷರಾಗಲು ಯುವ ನಾಯಕ ಹಾಗೂ ಉದ್ಯಮಿ ರೊ. ಸುಪ್ರೀತ್ ಚಾತ್ರಾರವರು ಒಪ್ಪಿರುವುದು ಇನ್ನೊಂದು ಹೆಮ್ಮೆಯ ವಿಚಾರವಾಗಿರುವುದರಿಂದ ಅವರಿಗೂ ಅಭಿನಂದನೆಗಳನ್ನು ಸಲ್ಲಿಸಿದರು. ಈ ಎರಡು ಹೊಸ ಅಧ್ಯಕ್ಷರುಗಳ ಮುಂದಾಳತ್ವದಲ್ಲಿ ನಮ್ಮ ಸಂಸ್ಥೆಯು ಇನ್ನೂ ಏಳಿಗೆಯನ್ನು ಸಾಧಿಸಲಿ ಎಂದು ಹಾರೈಸಿದರು.

ನಮ್ಮ ಸಂಸ್ಥೆಯ ರೊ. ಜಾನ್ಸನ್ ಆಲ್ಮೇಡಾರವರು ಹಾಗೂ ರೊ. ಔಜಲಿನ್ ರೆಬೆಲ್ಲೋರವರು ಇನ್ನೊಂದು ಅವಧಿಗೆ ಕುಂದಾಪುರದ ಪ್ರತಿಷ್ಠಿತ ರೋಜರಿ ಕ್ರೆಡಿಟ್ ಸೊಸೈಟಿಯ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದುದರಿಂದ ಅವರಿಗೂ ಎಲ್ಲರ ವತಿಯಿಂದ ಶುಭಾಶಂಸನೆಗಳನ್ನು ನೀಡಿದರು. ರೊ. ನಂದಾ ನಾಯಕ್‌ರವರು ಈ ವಾರದ ಲಕ್ಕಿ ರೋಟೇರಿಯನ್ ಆಗಿ ಆಯ್ಕೆಯಾದರು. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ನಗೆಚಟಾಕಿ ಸಿಡಿಸಿದರು. ರೊ. ಔಜಲಿನ್ ರೆಬೆಲ್ಲೋರವರು ಧನ್ಯವಾದ ಸಮರ್ಪಣೆಗೈದರು. ರಾಷ್ಟ್ರಗೀತೆಯೊಂದಿಗೆ ಸಭೆ ಸಂಪನ್ನಗೊಂಡಿತು.










ಈ ಸಾಲಿನ ಜಿಲ್ಲಾ ಸಮ್ಮೇಳನ "ನವೋತ್ಸವ"ವು ಉಡುಪಿ ಅಂಬಾಗಿಲಿನ ಅಮೃತ್ ಗಾರ್ಡನ್‌ನಲ್ಲಿ ವಿಜೃಂಭಣೆಯಿಂದ ನಡೆಯಿತು. ಆ್ಯನ್ ಶಾಲಿನಿ ಶೆಟ್ಟಿಯವರು ಈ ಕಾರ್ಯಕ್ರಮದಲ್ಲಿ RIPR ಆಗಿ ಆಗಮಿಸಿದ IPDG ರೊ. ಮಂಜು ಫಡ್ಕೆಯವರಿಂದ PHF ಪದವಿಯನ್ನು ಪಡೆದರು. ನಮ್ಮ ಕ್ಲಬ್ಬಿನ ವತಿಯಿಂದ 28 ಸದಸ್ಯರು ಇದರಲ್ಲಿ ಭಾಗಿಯಾಗಿದ್ದರು.



ತಾ. 24ರಂದು ನಮ್ಮ ಕ್ಲಬ್ಬಿನ ಸ್ಥಾಪಕ ಸದಸ್ಯರಾದ ರೊ. ವಿಜಯ್ ಶೆಟ್ಟಿಯವರು ತಮ್ಮ ಹುಟ್ಟುಹಬ್ಬವನ್ನು ಹೋಟೆಲ್ ಯುವ ಮನಿಷ್‌ನಲ್ಲಿ ಆಚರಿಸಿದರು. ನಮ್ಮ ಕ್ಲಬ್ಬಿನ ಹೆಚ್ಚಿನ ಸದಸ್ಯರು ಮತ್ತು ರೊ. ವಿಜಯ್ ಶೆಟ್ಟಿಯವರ ಅಪಾರ ಸ್ನೇಹಿತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅವರಿಗೆ ಶುಭ ಕೋರಿದರು.

## ಕಳೆದ ವಾರದ ಚಿಂತನೆ

ಜೇಬು ಖಾಲಿಯಾದಾಗ ಜೀವನದಲ್ಲಿ ಎದುರಾಗುವ ಒಂದೊಂದು ತಿರುವು ಕೂಡ ನಮಗೆ ಬದುಕಲು ಒಂದೊಂದು ದಾರಿಯನ್ನು ತೋರಿಸುತ್ತದೆ. ಆದರೆ ಜೇಬು ತುಂಬಿರುವಾಗ ಎದುರಾಗುವ ಒಂದೊಂದು ತಿರುವು ಕೂಡಾ ನಮಗೆ ನಮ್ಮ ದಾರಿಯನ್ನು ತಪ್ಪುವಂತೆ ಮಾಡಬಹುದು. ಆದುದರಿಂದ ಎರಡೂ ಸಂದರ್ಭಗಳಲ್ಲೂ ಜಾಣ್ಮೆಯ ಆಯ್ಕೆಯನ್ನು ನಾವು ಮಾಡಬೇಕಿದೆ.

ನೀಡಿದವರು : ರೊ. ವಿವಿಯನ್ ಕ್ರಾಸ್ಟೋ

**Rotary Information**

## Around The Wheel

### Duties of the Sergeant-at-Arms in Rotary:

His responsibilities during the the Club meetings are to ensure that the following physical arrangements are done in a proper way: Seating Arrangements, National Anthem, National Flag, Theme Banner, Club Banner, Rotary Flag, President's Collar, Members ID, Make up Cards, Head Table, Gong & Gavel, Name Boards, Lighting, Agenda, Sound System, Rotary Pin, Attendance Register, Club Pennant, Refreshments etc.

**By Rtn. Doma Chandrashekar**

**"Life is a journey that must be traveled no matter how bad the roads and accommodations." – Oliver Goldsmith**
**Even with challenges, it's important to keep moving forward.**

Rtn. Dr. S. N. Padiyar
1985-86 & 1986-87

Rtn. B. Arun Kumar Shetty
1987-88

Rtn. Dr. H. Rammohan
1988-89

Rtn. K. Shridhar Kamath
1989-90

Rtn. Dr. Anand Nayak
1990-91

Rtn. B. Ramachandra Prabhu
1991-92

Rtn. G. Santhosh Kumar Shetty
1992-93

Rtn. Dr. H. A. Vishweshwar
1993-94

Rtn. Dr. H. R. Hebbar
1994-95

Rtn. K. T. Surendranath
1995-96

Rtn. S. Sadananda Chatra
1996-97

Rtn. B. C. Somayaji
1997-98

Rtn. K. Suresh Kamath
1998-99

Rtn. S. Subraya Halambi
1999-2000

Rtn. S. Vijaya Shetty
2000-01

Rtn. K. Seetharama Nackathaya
2001-02

Rtn. U. S. Shenoy
2002-03

Rtn. Dr. Umesh Puthran
2003-04

Rtn. Dr. B. V. Udupa
2004-05

Rtn. A. Shantharam Pai
2005-06

Rtn. K. Shantharam Prabhu
2006-07

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 02–02–2025ನೇ ಆದಿತ್ಯವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಮಹೇಂದ್ರ ಶೆಟ್ಟಿ ಮತ್ತು ಆ್ಯನ್ ಸೌಮ್ಯ ಎಂ. ಶೆಟ್ಟಿ ಇವರಿಗೆ ಕ್ಲಬ್ಬಿನ ಎಲ್ಲಾ ಸದಸ್ಯರ ಪರವಾಗಿ ಶುಭಾಶಯಗಳು.
ಮೊಬೈಲ್ : 9008444559

## ಹುಟ್ಟುಹಬ್ಬದ ಶುಭಾಶಯಗಳು



ರೊ. ಪಿ. ಪ್ರಮೋದ್ ರಾವ್
ದಿನಾಂಕ : ಜನವರಿ 30
ಮೊಬೈಲ್ : 9844613019

"Learning is a weightless treasure you can always carry easily."
– Chinese Proverb

Rotary ರೋಟರಿ ಕ್ಲಬ್ ಕುಂದಾಪುರ ದಕ್ಷಿಣ
RI Dist. 3182, Zone - 1
THE MAGIC OF ROTARY

ಹಾಗೂ

ಭಾರತೀಯ ಕಿಸಾನ್ ಸಂಘ ಕುಂದಾಪುರ

ಇವರ ಸಹಯೋಗದೊಂದಿಗೆ

## ಕೃಷಿ ವಿಚಾರ ಸಂಕಿರಣ

ದಿನಾಂಕ : 02–02–2025, ಆದಿತ್ಯವಾರ
ಸಮಯ : ಬೆಳಿಗ್ಗೆ ಗಂಟೆ 9:00ರಿಂದ 1:00ರ ತನಕ
ಸ್ಥಳ : ರೋಟರಿ ಲಕ್ಷ್ಮೀ ನರಸಿಂಹ ಕಲಾಮಂದಿರ, ಕುಂದಾಪುರ

ಅರಣ್ಯ ಕೃಷಿ (ಕಾಡು ಕೃಷಿ) – ದೀರ್ಘಾವಧಿ ಹೂಡಿಕೆಗಾಗಿ
ಮಶ್ರೂಮ್ ಕೃಷಿ – ಸ್ವ ಉದ್ಯೋಗಕ್ಕಾಗಿ
ಸಾವಯವ ತಾರಸಿ ಕೃಷಿ – ವಿಷಮುಕ್ತ ಆಹಾರಕ್ಕಾಗಿ

ಸ್ವಾಗತ ಬಯಸುವ

ರೊ. ಭರತ್ ಶೆಟ್ಟಿ
ಕಾರ್ಯದರ್ಶಿ

ರೊ. ಜುಡಿತ್ ಮೆಂಡೊನ್ಸಾ
ಅಧ್ಯಕ್ಷರು

ಸರ್ವ ಸದಸ್ಯರು, ರೋಟರಿ ಕ್ಲಬ್ ಕುಂದಾಪುರ ದಕ್ಷಿಣ

## The 4 Way Test

*of the things we think, say or do*

1. Is it the TRUTH?
2. Is it FAIR to all concerned?
3. Will it build GOODWILL and BETTER FRIENDSHIPS?
4. Will it be BENEFICIAL to all concerned?

Email id – rotaryclub.kundapurasouth@gmail.com

Rtn. T. Raghavendra Hatwar
2007-08

Rtn. K. Shankar
2008-09

Rtn. S. Jayakar Shetty
2009-10

Rtn. K. K. Kanchan
2010-11

Rtn. Abhinandan A. Shetty
2011-12

Rtn. Vivian Crasto
2012-13

Rtn. G. Shreedhar Shetty
2013-14

Rtn. K. P. Bhat
2014-15

Rtn. P. Vasudeva Karanth
2015-16

Rtn. Aouzline F. Rebello
2016-17

Rtn. J. Srinath Rao
2017-18

Rtn. Johnson D' Almeida
2018-19

Rtn.Devaraj
2019-20

Rtn. Dr. Uttam Kumar Shetty
2020-21

Rtn.Mahendr Shetty
2021-22

Rtn.Sathyanarayana Puranik
2022-23

Rtn.Suresh Mallya
2023-24

*This Bulletin is sponsored by :*
Rtn. Ramananda Karanth
Mob. : 9986473841

For Private Circulation only